

# ಜಾಣೆ ಕತ್ರೀನಾ

ಬಾಲಿವುಡ್‌ನಲ್ಲಿ ಸಲ್ಮಾನ್ ಖಾನ್ ಜೊತೆಗೆ ಸ್ನೇಹ ಬೆಳೆಸಿಕೊಂಡ ಬಳಿಕವೂ ಹಲವಾರು ಗೆಳೆಯ ಗೆಳತಿಯರನ್ನು ಹೊಂದಿರುವ ಹೆಗ್ಗಳಿಕೆ ಕತ್ರೀನಾ ಕೈಫ್‌ಳದ್ದು. ಸಾಮಾನ್ಯವಾಗಿ ಸಲ್ಮಾನ್ ಜೊತೆಗೆ ಕ್ಲೋಸ್ ಆಗಿರುವ ನಟಿಯರು ಬೇರೆ ನಟ– ನಟಿಯರ ಜೊತೆಗೆ ಕ್ಲೋಸ್ ಆಗಿ ಕಾಣಿಸಿಕೊಳ್ಳುವುದು ಕಡಿಮೆ. ಇದಕ್ಕೆ ಕಾರಣ ಸಲ್ಮಾನ್ ಖಾನ್‌ನ ಕಪಿಮುಷ್ಟಿ ಎನ್ನುವವರೂ ಇದ್ದಾರೆ. ಒಂದು ಕಾಲದಲ್ಲಿ ಸಲ್ಲೂ ಮತ್ತು ಕತ್ರೀನಾ ಮಧ್ಯೆ ರಿಲೇಷನ್‌ಷಿಪ್ ಇದೆ ಎನ್ನುವ ಸುದ್ದಿ ಹಬ್ಬಿತ್ತು, ಅದಕ್ಕೆ ತಕ್ಕಂತೆ ಸಲ್ಲೂ ಮಿಯಾನ ಹಲವು ಚಿತ್ರಗಳಲ್ಲಿ ಕತ್ರೀನಾಗೆ ನಾಯಕಿ ಪಟ್ಟ ಲಭಿಸಿತ್ತು. ಅದರ ಹೊರತಾಗಿಯೂ ಕತ್ರೀನಾ ಬೇರೆ ಹೀರೊಗಳ ಜೊತೆಗೂ ನಟಿಸುತ್ತಿದ್ದಾಳೆ. ಇತ್ತೀಚಿನ ದಿನಗಳಲ್ಲಿ ವಿಕ್ಕಿ ಕೌಶಲ್ ಜೊತೆಗೆ ಕತ್ರೀನಾಳ ಹೆಸರು ಹೆಚ್ಚಾಗಿ ಅಂಟಿಕೊಂಡು ಕೇಳಿಬರುತ್ತಿದೆ.

‘ಕೊರೊನಾ ಲಾಕ್‌ಡೌನ್ ಮುಗಿದ ತಕ್ಷಣ ಮೊದಲು ಮಾಡುವ ಕೆಲಸ ಕಾರು ತೆಗೆದುಕೊಂಡು ನನ್ನ ಪ್ರೀತಿಪಾತ್ರರ ಮನೆಗೆ ಹೋಗೋದು’ ಎಂದು ವಿಕ್ಕಿ ಕೌಶಲ್ ಟ್ವೀಟ್ ಮಾಡಿದ್ದಾನೆ. ಅದಕ್ಕೆ ಜಾಲತಾಣದಲ್ಲಿ ಬಂದ ತಕ್ಷಣದ ಕಾಮೆಂಟು– ‘ಯಾರ ಮನೆಗೆ? ಕತ್ರೀನಾ ಮನೆಗಾ?’ ಎನ್ನುವುದು! ಕತ್ರೀನಾಳ ಪ್ರತಿಕ್ರಿಯೆ ಸಣ್ಣದೊಂದು ಸ್ಮೈಲ್.

ರಣಬೀರ್ ಕಪೂರ್ ಜೊತೆಗೆ ಕತ್ರೀನಾ ನಿಕಟವಾಗಿದ್ದ ಸಂದರ್ಭದಲ್ಲೇ ಅಲಿಯಾ ಭಟ್ ರಣಬೀರ್‌ನ ಪ್ರೇಯಸಿಯಾಗಿ ಬಂದದ್ದು ಹಳೆಯ ಸುದ್ದಿ. ಆ ಬಳಿಕ ಕತ್ರೀನಾ ಮತ್ತು ಅಲಿಯಾ ನಡುವಣ ಸಂಬಂಧ ಹಳಸಿತ್ತು. ಆದರೆ ಈಗ ಕತ್ರೀನಾ ಅಲಿಯಾ ಜೊತೆಗೂ ಒಳ್ಳೆಯ ಸ್ನೇಹ ಬೆಳೆಸಿಕೊಂಡಿದ್ದಾಳೆ. ಲಾಕ್‌ಡೌನ್ ಆಗುವುದಕ್ಕಿಂತ ಮುಂಚೆ ಕತ್ರೀನಾ ತನ್ನ ಮನೆಯಲ್ಲಿ ಏರ್ಪಡಿಸಿದ್ದ ಸಂಡೇ ಬ್ರಂಚ್ ಪಾರ್ಟಿಗೆ ಬಂದವರು ಅಲಿಯಾ ಮತ್ತು ಪ್ರಿಯಾಂಕಾ ಚೋಪ್ರಾ. ಈ ಮೂವರೂ ಈಗ ನಿಕಟ ಸ್ನೇಹಿತರು. ಅಲಿಯಾ ತಾನು ಮಾಡಿದ ಬನಾನಾ ಕೇಕ್ ಚಿತ್ರವನ್ನು ಜಾಲತಾಣದಲ್ಲಿ ಹಾಕಿದಾಗ ಮೊದಲ ಲೈಕ್ ಬಂದದ್ದು ಕತ್ರೀನಾಳಿಂದ. ‘ನನಗೂ ಕೇಕ್ ಕಳಿಸು‘ ಎಂಬ ಕತ್ರೀನಾ ಮನವಿಗೆ ಅಲಿಯಾ ಖುಷಿಯಾಗಿದ್ದಾಳಂತೆ. ಈ ಮಧ್ಯೆ ವಿಕಾಸ್ ಬೆಹ್ಲ್ ನಿರ್ದೇಶನದ ‘ಡೆಡ್ಲೀ’ ಸಿನಿಮಾದಲ್ಲಿ ಅಮಿತಾಭ್‌ನ ಮಗಳ ಪಾತ್ರದಲ್ಲಿ ನಟಿಸುತ್ತಿರುವ ಸುದ್ದಿಯನ್ನು ಕತ್ರೀನಾ ಅಲ್ಲಗಳೆದಿದ್ದಾಳೆ. ‘ನಾನು ಆ ಚಿತ್ರಕ್ಕೆ ಸಹಿ ಹಾಕಿಲ್ಲ’ ಎಂದಿದ್ದಾಳೆ. ಒಟ್ಟಾರೆ ಕತ್ರೀನಾ ಜಾಣೆ. ಎಲ್ಲರ ಜೊತೆಗೂ ಸ್ನೇಹ ಸಂಪಾದಿಸುವುದರಲ್ಲಿ ಎಲ್ಲರಿಗಿಂತ ಮುಂದೆ. ■



# ದಾನಶೂರ ಸಲ್ಮಾನ್

ಸಲ್ಮಾನ್ ಖಾನ್ ಕುರಿತು ಎಷ್ಟೇ ಆಕ್ಷೇಪಗಳಿದ್ದರೂ ಆತನ ದಾನಶೂರ ವ್ಯಕ್ತಿತ್ವದ ಬಗ್ಗೆ ಎರಡು ಮಾತುಗಳಿಲ್ಲ. ಕೊರೊನಾ ಲಾಕ್‌ಡೌನ್‌ನಿಂದ ಮನೆಯಲ್ಲೇ ಉಳಿದಿರುವ ಹಾಲಿವುಡ್‌ನ ಸುಮಾರು 25 ಸಾವಿರ ಮಂದಿ ದಿನಗೂಲಿ ನೌಕರರಿಗೆ ಸಲ್ಮಾನ್ ಗುಟ್ಟಾಗಿ ಹಣಕಾಸು ನೆರವು ನೀಡಿದ್ದಾನಂತೆ. ಪಶ್ಚಿಮ ಭಾರತ ಸಿನಿಮಾ ನೌಕರರ ಒಕ್ಕೂಟದ ಖಾತೆಗೆ ಅದಕ್ಕಾಗಿ ಆತ 4.80 ಕೋಟಿ ರೂಪಾಯಿ ಹಾಕಿದ್ದಾನೆಂದು ಸುದ್ದಿ. ಎರಡನೇ ಹಂತದಲ್ಲಿ ಇನ್ನೂ 10.50 ಕೋಟಿ ರೂಪಾಯಿ ನೀಡುವುದಾಗಿ ಆತ ಭರವಸೆ ನೀಡಿದ್ದಾನಂತೆ. ಈ ಒಕ್ಕೂಟದಲ್ಲಿ ಒಟ್ಟು 5 ಲಕ್ಷ ಬಾಲಿವುಡ್ ನೌಕರರು ಸದಸ್ಯರಾಗಿದ್ದು ಅವರಲ್ಲಿ 25 ಸಾವಿರ ಮಂದಿ ತೀವ್ರ ಹಣಕಾಸು ದುಃಸ್ಥಿತಿಯನ್ನು ಎದುರಿಸುತ್ತಿದ್ದಾರೆಂದು ಒಕ್ಕೂಟ ತಿಳಿಸಿದೆ. ಅಕ್ಷಯ ಕುಮಾರ್ ಪ್ರಧಾನಿ ಫಂಡ್‌ಗೆ 25 ಕೋಟಿ ರೂಪಾಯಿ ನೀಡಿ ಸುದ್ದಿ ಮಾಡಿದ್ದರೆ, ಸಲ್ಮಾನ್ ನೇರವಾಗಿ ಸಂಬಂಧಿಸಿದ ನೌಕರರಿಗೇ ಲಾಭ ತಲುಪುವಂತೆ ನೋಡಿಕೊಂಡಿರುವುದರ ಬಗ್ಗೆ ಬಾಲಿವುಡ್‌ನಲ್ಲಿ ಶ್ಲಾಘನೆ ಕೇಳಿಬರುತ್ತಿದೆ. ■